# IN THE COURT OF THE ADDL. SENIOR CIVIL JUDGE & JMFC., GUBBI
# OS – 108/2022

Witness present and duly sworn on : 19.04.2024

Further cross Examination: by Counsel for Defendant No.9. :

ದಾವಾ ಆಸ್ತಿಗಳನ್ನು ಬಾಯಿ ಮಾತಿನ ವಿಭಾಗ ಮಾಡಿಕೊಂಡು ಪ್ರತ್ಯೇಕವಾಗಿ ವಾಸ ಇದ್ದೇವೆ ಎಂದರೆ ಸರಿ. ಐಟಂ ನಂ.1 ಆಸ್ತಿಯು ಹೊಲ. ಐಟಂ ನಂ.4 ಆಸ್ತಿಯು ಅಡಿಕೆ ಇದೆ. ಸದರಿ ಆಸ್ತಿಯಲ್ಲಿ ನಾನು ಸ್ವಾಧೀನ ಇದ್ದೇನೆ. ಸದರಿ ಆಸ್ತಿಯು ವಿಭಾಗ ಮಾಡಿಕೊಂಡಿದ್ದು ಅದರಲ್ಲಿ 2 ಭಾಗ ಆಗಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು 2 ಭಾಗ ಮಾಡಿಕೊಂಡು ಪ್ರತ್ಯೇಕ ವಾಸ ಇದ್ದರು ಸಹ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿಗಳು ಕೆಂಪೆಗೌಡ ಬಿನ್ ಮಾಸೇಗೌಡ ರವರ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ಅವರ ಮರಣದ ನಂತರ ಸದರಿ ಆಸ್ತಿಗಳು ಲಕ್ಕಮ್ಮನವರಿಗೆ ಬಂದಿದೆ ಎಂದರೆ ಸರಿಯಲ್ಲ. ಸರ್ವೆ ನಂ.93/4 ಆಸ್ತಿಯು 33 ಗುಂಟೆ ಹೇಮಾವತಿ ಚಾನೆಲ್ ಗೆ ಹೋಗಿದೆ ಎಂದರೆ ಸರಿ. ಸರ್ವೆ ನಂ.93/6 ರಲ್ಲಿ 16 ಗುಂಟೆ ಹೇಮಾವತಿ ಚಾನೆಲ್ ಗೆ ಹೋಗಿದೆ

ಎಂದರೆ ಸರಿ. ಸದರಿ ಹಣವನ್ನು ಕೆಂಪಗೌಡರವರ ಹೆಸರಿಗೆ ಪಡೆದಿರುತ್ತೇನೆ. ಕೆಂಪೆಗೌಡರವರ ವಾರಸುದಾರರು ವಿಭಾಗ ಮಾಡಿಕೊಂಡು ಪ್ರತ್ಯೇಕ ವಾಸ ಇದ್ದರು ಸಹ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಕೆಂಪೆಗೌಡ, ಮಾಸೇಗೌಡ ಪ್ರತ್ಯೇಕವಾಗಿ ಇದ್ದರು ಸಹ ದಾವಾ ಆಸ್ತಿಗಳು ವಿಭಾಗ ಆಗಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಕೆಂಪಮ್ಮ ರವರು OS No.45/2021 ದಾವೆ ಸಲ್ಲಿಸಿದ್ದಾರೆಂದರೆ ಸರಿಯಲ್ಲ. ಅವರ ತಂದೆಗೆ ಬಂದಿರುವ ಆಸ್ತಿಯಲ್ಲಿ ವಿಭಾಗ ಕೋರಿ ಸದರಿ ದಾವೆ ಸಲ್ಲಿಸಿದ್ದಾರೆಂದರೆ ಎಲ್ಲ ಆಸ್ತಿಗಳ ಮೇಲೆ ಸಲ್ಲಿಸಿರುತ್ತಾರೆ. ಸಾಕ್ಷಿ ಮುಂದುವರೆದು ಯಾವುದೇ ವಿಭಾಗ ಆಗಿರುವುದಿಲ್ಲ. ನನಗೆ ಎಲ್ಲ ವಿಷಯ ಗೊತ್ತಿದ್ದರು ಕೂಡಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**Re examination - Nil**

(Typed to my dictation in open court)

R.O.I & A.C.

Addl. Senior Civil Judge and
JMFC., Gubbi